# ಸರಕಾರಿ ಉರ್ದು ಪ್ರೌಢ ಶಾಲೆ(RMSA) ಅಣ್ಣಿಗೇರಿ

**ಮಾದರಿ ಪ್ರಶ್ನೆ ಪತ್ರಿಕೆ–05**

**ತರಗತಿ : 10ನೇ** | **ವಿಷಯ : ದ್ವಿತೀಯ ಭಾಷೆ ಕನ್ನಡ**

**ಅಂಕಗಳು : 80** | **ಸಮಯ : 3 ಗಂಟೆ**

---

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ (1X4=4)**

1 ಬಡಗಣ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ:
ಎ) ಗುಣವಾಚಕ ಬಿ) ಪರಿಮಾಣವಾಚಕ ಸಿ) ದಿಗ್ವಾಚಕ ಡಿ) ಭಾವನಾಮ

2 ಮಹೋತ್ಸವ ಪದವು ಈ ಸಂಧಿಗೆ ಉದಾಹರಣೆ:
ಎ) ಲೋಪಸಂಧಿ ಬಿ) ಯಣ್ ಸಂಧಿ ಸಿ) ಆದೇಶ ಸಂಧಿ ಡಿ) ಗುಣ ಸಂಧಿ

3 ಸಂತೋಷ ಪದದ ತದ್ಭವ ರೂಪ:
ಎ) ಸಂತಸಬಿ) ಖುಷಿ ಸಿ) ಆನಂದ ಡಿ)ಸಂತೋಷ

4 ಈ ಪದವು ಅಂಶಿ ಸಮಾಸಕ್ಕೆ ಉದಾಹರಣೆ
ಎ)ತಂಗಾಳಿ ಬಿ)ತುದಿಮೂಗು ಸಿ)ಸಪ್ತಸ್ವರ ಡಿ)ಅರಮನೆ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ (1X12=12)**

5 ಕವಿ ಮಾನವನ ಬದುಕನ್ನು ಇಬ್ಬನಿಯಂತೆ ಇರಬೇಕು ಎಂದು ಏಕೆ ಬಯಸುತ್ತಾರೆ?

6 ಪ್ಲಾಸಿ ಕದನ ನಡೆದ ವರ್ಷ ಯಾವುದು?

7 ಗೋಪಾಲನ ಬೆಳಗಿನ ಮುಖ್ಯ ಕೆಲಸ ಏನಾಗಿತ್ತು?

8 ಬೇಟೆಗಾರನು ಜಿಂಕೆಯನ್ನು ಕೊಲ್ಲಲು ಹೇಗೆ ಪ್ರಯತ್ನ ಮಾಡಿದನು?

9 ಸಸ್ತನಿಗಳ ಅಶ್ರಯದಾಣಗಳು ಯಾವುವು?

10 ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?

11 ಪುಟ್ಟರಾಜರ ತಂದೆ ತಾಯಿಯ ಹೆಸರೇನು?

12 ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?

13 ಹೆಡ್ ಮಾಸ್ತರರು ಸಂತೋಷಗೊಂಡಿದ್ದು ಯಾಕೆ?

14 ಏಣಿಗೆ ಬೀಳುವ ಭಯವಿಲ್ಲ ಏಕೆ?

15 ಕುಣಿಗಲ್ ಕೆರೆ ಹೇಗೆ ಬಾಗಿದೆ?

16 ಜನರಿಗೆ ಮೋಸ ವಂಚನೆ ಯಾರು ಮಾಡುವುದಿಲ್ಲಾ?

**III ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ.** **(8X2=16)**

17 ಹಕ್ಕಿಗೂಡಿನ ವಿಶೇಷತೆಗಳೇನು?

18 ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?

19 ಕುಣಿಗಲ್ ಕೆರೆಯನ್ನು ಜನಪದರು ಹೇಗೆ ವರ್ಣಿಸಿದ್ದಾರೆ?

20 ಗುರುಗಳು ಮಕ್ಕಳಿಗೆ ಬದುಕನ್ನು ಹೇಗೆ ನಡೆಸಬೇಕೆಂದು ತಿಳಿವಳಿಕೆ ಹೇಳಿದರು?

21 ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?

22 ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?

23 ನಾಗರೀಕತೆಯ ಬೆಳವಣಿಗೆಯ ಬಗ್ಗೆ ಕವಯತ್ರಿಗೆ ಯಾವ ಅಳುಕು ಇದೆ?

24 ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?

**IV ಈ ಕೆಳಗಿನ ಸಾಹಿತಿಯ ಜನನ,ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **( 1x3=3)**

25 ಸುಕನ್ಯಾ ಮಾರುತಿ

**V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **(1X3=3)**

26 ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ.

**VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ** **(1x3=3)**

27 ನಾಡನರಿ

**VII ಗಾದೆ ವಿಸ್ತರಿಸಿ ಬರೆಯಿರಿ.** **(1X3=3)**

28 ಕಾಯಕವೇ ಕೈಲಾಸ

**ಅಥವಾ**

ಮಾತು ಬೆಳ್ಳಿ ಮೌನ ಬಂಗಾರ

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ.** **(5X3=15)**

29 ಅವರ ನಡೆಯೇ ನನಗೆ ಆಚಾರವಾಗಬೇಕು

30 ಕಾಡಿನಲ್ಲಿ ಮುದ್ದು ಕಂದನಿಗೆ ಹೆದರಿಕೆಯಂತೆ ಗೋಪಾಲ

31 ಒಂದು ಸರ್ಕಾರ ಉರುಳಿಸಿ ಇನ್ನೊಂದು ಸರ್ಕಾರ ತರಬಹುದು

32 ಶಾಂತಿಯಲಿ ಬದುಕಿ ನೀ ಕರ್ತವ್ಯವನ್ನು ಮುಗಿಸು

33 ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು

SHARANU SH

**IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **(1x4=4)**

34 ಒಂದು ಬಾಣಕೆ ..........................................

..........................................................................

..........................................................................

..............................ಹೋರಾಡು ಹಗಲಿರುಳು

**ಅಥವಾ**

ಕೆಸರೊಳಿದ್ದರೂ ..................................................

..........................................................................

..............................ಮನುಜತೆಯ ಸಾರ್ಥಕತೆಗೆ

**X ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

35 ಕವಿ ಯುಗದ ಆದಿಯನ್ನು ಸವಿಚೈತ್ರ ಎಂದು ಏಕೆ ಬಣ್ಣಿಸಿದ್ದಾರೆ?

**ಅಥವಾ**

ಚೈತ್ರದಲ್ಲಾಗುವ ಪ್ರಕೃತಿಯ ಬದಲಾವಣೆಗಳಾವುವು?

**XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **(2 x2=4)**

**36** ಕೇದಾರ ದೇವಾಲಯ ಬಹು ಸುಂದರವಾಗಿದೆ.ಗರ್ಭಗುಡಿಯ ಒಳಗೆ ಇರುವ ಕೇದಾರೇಶ್ವರ ಅದು ಲಿಂಗವೂ ಅಲ್ಲ,ಮೂರ್ತಿಯು ಅಲ್ಲ.ಬರೇ ಒಂದು ಒರಟು ಕಲ್ಲಿನ ಬಂಡೆ.ಪರ್ವತದ ಶಿಖರಾಕೃತಿಯ ಮೇಲೆ ದೇವಾಲಯ ನಿರ್ಮಿಸಿದಂತೆ ಭಾಸವಾಗುತ್ತದೆ.ಪ್ರಾಯಶಃ ಹೊರಗಿನ ಪರ್ವತದ ಸಾಂಕೇತಿಕ ಪ್ರಕೃತಿಯ ಪೂಜೆ ಒಳಗೆ ನಡೆಯುತ್ತದೆ.ಜಾತಿ,ಮತ,ಲಿಂಗ ಯಾವ ಭೇದವೂ ಇಲ್ಲದೆ ಪ್ರತಿಯೊಬ್ಬರೂ ತಾವೆ ಮುಟ್ಟಿ ಪೂಜಿಸುವ ಅಪೂರ್ವ ಅವಕಾಶ ಇಲ್ಲಿದೆ.ಆ ಎತ್ತರದಲ್ಲಾದರೂ ಮನುಷ್ಯ ಮೇಲು–ಕೀಳು ಮರೆತಿದ್ದಾನೆ ಎಂಬುದು ಸಂತೋಷದ ಸಂಗತಿ.ಕೇದಾರನಾಥನ ಬಗೆಗೆ ಪುರಾಣದಲ್ಲಿ ವಿಚಿತ್ರವಾದ ಕಥೆಯೊಂದಿದೆ.ಒಮ್ಮೆ ಶಿವನು ಗೂಳಿಯ ರೂಪವನ್ನು ಧರಿಸಿ ಪರ್ವತ ಪ್ರದೇಶದಲ್ಲಿ ಅಲೆಯುತ್ತಿದ್ದನು.ಅಲ್ಲಿದ್ದ ಪಾಂಡವರು ಇದನ್ನು ತಿಳಿದು ಆ ಗೂಳಿಯನ್ನು ಹಿಡಿಯಲು ಪ್ರಯತ್ನಿಸಿದರು.ತಪ್ಪಿಸಿಕೊಂಡು ಓಡುತ್ತಿದ್ದ ಗೂಳಿ ಭೂಮಿಯೊಳಗೆ ನುಗ್ಗಲು ಪ್ರಯತ್ನಿಸಿತು.ಅಗ ಭೀಮನು ಅದರ ಹಿಂಭಾಗವನ್ನು ತಬ್ಬಿಕೊಂಡು ಅದೆ ಶಿಲಾರೂಪದಲ್ಲಿ ಉಳಿದುಕೊಂಡು ಕೇದಾರೇಶ್ವರ ಆಗಿದೆ.ಗೂಳಿಯು ಇನ್ನುಳಿದ ಭಾಗಗಳಾದ ಕಾಲುಗಳು–ತುಂಗನಾಥ,ಮುಖ–ರುದ್ರನಾಥ,ಹೊಟ್ಟೆ–ಮಹೇಶ್ವರ,ಶಿರ–ಕಪಾಲೇಶ್ವರ ಹೀಗೆ ಐದು ಕಡೆಗಳಲ್ಲಿ ಶಿವ ಗೋಚರವಾದ.ಇವುಗಳೆ ಪಂಚಕೇದಾರಗಳೆಂದು ಪ್ರಸಿದ್ಧವಾಗಿವೆ.ಮಂದಿರದ ಹೊರಗೆ ಈಶಾನ್ಯಕುಂಡ,ಅಮೃತಕೊಂಡ,ಹಂಸಕುಂಡ,ರೇತಸಕುಂಡ ಎಂಬ ತೀರ್ಥಗಳಿವೆ.ದೇವಸ್ಥಾನದ ಸ್ವಲ್ಪದೂರದಲ್ಲಿ ಶಂಕರಾಚಾರ್ಯರ ಸಮಾಧಿ ಇದೆ.

**ಪ್ರಶ್ನೆಗಳು**

ಅ)ಪುರಾಣದಲ್ಲಿ ಕೇದಾರನಾಥನ ಬಗೆಗೆ ಇರುವ ವಿಚಿತ್ರ ಕಥೆ ಯಾವುದು?

ಆ) ಕೇದಾರವನ್ನು ದರ್ಶಿಸಿದವರಿಗೆ ಉಂಟಾಗುವ ಸಂತೋಷದ ಸಂಗತಿ ಯಾವುದು?

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ. (1X4=4)**

37 ರೈತರ ಆತ್ಮಹತ್ಯೆಗೆ ಕಾರಣಗಳು ಮತ್ತು ಪರಿಹಾರೋಪಾಯಗಳು

**ಅಥವಾ**

ಮತದಾನದ ಮಹತ್ವ

**XIII ಈ ಕೆಳಗಿನ ಯವೂದಾದರೂ ಒಂದು ಪತ್ರವನ್ನು ಬರೆಯಿರಿ (1X5=5)**

38 ನಿಮ್ಮನ್ನು ವಿಜಯಪುರದ ಸುಲ್ತಾನಪುರದಲ್ಲಿ ವಾಸಿಸುತ್ತಿರುವ ಅಭಿಷೇಕ/ಸುನಂದಾ ಎಂದು ಭಾವಿಸಿಕೊಂಡು ಕೊಪ್ಪಳದಲ್ಲಿರುವ ನಿಮ್ಮ ಗೆಳೆಯ/ಗೆಳತಿಗೆ ನಿಮ್ಮ ಹುಟ್ಟು ಹಬ್ಬದ ಆಚರಣೆಗೆ ಆಗಮಿಸುವಂತೆ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ತುಮಕೂರಿನ ಸರಕಾರಿ ಪ್ರೌಢ ಶಾಲೆಯಲ್ಲಿ ಕಲಿಯುತ್ತಿರುವ ಮನೋಜ/ಮಾನಸ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ಮೈದಾನದಲ್ಲಿ ಉದ್ಯಾನವನ ಸ್ಥಾಪಿಸುವಂತೆ ತೋಟಗಾರಿಕಾ ಇಲಾಖೆಯ ಮುಖ್ಯಸ್ಥರಿಗೆ ಮನವಿ ಪತ್ರ ಬರೆಯಿರಿ

***********

SHARANU SH